ಆ) 1-7-84ರ ನಂತರ ನೇಮಕವಾದ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲು ನಿಯಮಗಳಲ್ಲಿ ಅಸ್ಪದ ಇಲ್ಲ.

ಕೃಷಿ ಇಲಾಖೆಯಲ್ಲಿ ಮರು ವರ್ಗಾವಣೆ

2822 (3777)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಇಲಾಖೆಯಲ್ಲಿ 1997-98ನೇ ಹಾಗೂ 1998-99ನೇ ಅಕ್ಟೋಬರ್ 15ರ ಒಳಗೆ ಎಷ್ಟು ಮಂದಿ ಅಧಿಕಾರಿಗಳನ್ನು (ವಿವಿಧ ಹುದ್ದೆಯಲ್ಲಿ) ವರ್ಗಾಯಿಸಲಾಗಿದೆ.

ಆ) ವರ್ಗಾವಣೆ ಆದೇಶ ನೀಡಿದ ಬಳಿಕ ಸ್ಥಳ ಬದಲಾಯಿಸಿ ಮರು ವರ್ಗಾಯಿಸಿದ ಪ್ರಕರಣಗಳು ಎಷ್ಟು?

ಇ) ವರ್ಗಾವಣೆ ಆದೇಶದ ಬಳಿಕ ಈ ಆದೇಶಗಳನ್ನು ರದ್ದುಗೊಳಿಸಿ ಮತ್ತೆ ಅದೇ ಸ್ಥಳದಲ್ಲಿ ಮುಂದುವರಿಸಿದ ಪ್ರಕರಣಗಳು ಎಷ್ಟು? ಇವುಗಳಿಗೆ ಕಾರಣಗಳೇನು? (ವಿವರ ನೀಡುವುದು)

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):

ಅ) 1997-98ನೇ ಸಾಲಿನಲ್ಲಿ ಒಟ್ಟು 372

1998-99ನೇ ಸಾಲಿನಲ್ಲಿ ಒಟ್ಟು 1509 (ಹುದ್ದೆವಾರು ಪಟ್ಟಿ ಅನುಬಂಧ-1ನ್ನು ಲಗತ್ತಿಸಿದೆ)

ಆ) 1997-98 ಇಲ್ಲ

1998-99 206

ಇ) 1997-98 ಇಲ್ಲ

1998-99 13

ಕಾರಣಗಳನ್ನು (ಅನುಬಂಧ-2ರಲ್ಲಿ) ವಿವರಿಸಿದೆ.

ಅನುಬಂದ- 1

ವಿಧಾನ ಸಭಾ ಪ್ರಶ್ನೆ 3777 ಶ್ರೀ ಯು. ಆರ್. ಸಭಾಪತಿ ಶಾಸಕರು, ಇವರ ಪ್ರಶ್ನೆಗಳಿಗೆ ಉತ್ತರ

| ಕ್ರಮ ವಿವರ ಸಂಖ್ಯೆ | ಹುದ್ದೆಯ ಹೆಸರು | 1997-98ನೇ ಸಾಲಿನ ವಿವರ | | | 1998-99ನೇ ಸಾಲಿನ | | |
|---|---|---|---|---|---|---|---|
| | | ಅ | ಆ | ಇ | ಅ | ಆ | ಇ |
| 1. | ಅಪರ ಕೃಷಿ | | | | | | |
| | ನಿರ್ದೇಶಕರು | 4 | - | - | - | - | - |
| 2. | ಜಂಟಿ ಕೃಷಿ | | | | | | |
| | ನಿರ್ದೇಶಕರು | - | - | - | 15 | 2 | 2 |
| 3. | ಉಪ ಕೃಷಿ | | | | | | |
| | ನಿರ್ದೇಶಕರು | 3 | - | - | 21 | 3 | 1 |
| 4. | ಸಹಾಯಕ ಕೃಷಿ | | | | | | |
| | ನಿರ್ದೇಶಕರು | 85 | - | - | 174 | 25 | 7 |
| 5. | ಕೃಷಿ ಅಧಿಕಾರಿ | 80 | - | - | 169 | 18 | 2 |
| 6. | ಸಹಾಯಕ ಕೃಷಿ | | | | | | |
| | ಅಧಿಕಾರಿ | 190 | - | - | 1061 | 148 | 1 |
| 7 | ಸಹಾಯಕ ಕೃಷಿ | | | | | | |
| | ಅಧಿಕಾರಿ (ರ್ಯಿಮ) | 10 | - | - | 54 | 10 | - |
| 8. | ಆಡಳಿತ ಅಧಿಕಾರಿ | - | - | - | 2 | - | - |
| 9. | ಆಡಳಿತ ಸಹಾಯಕರು | - | - | - | 13 | - | - |
| | ಒಟ್ಟು | 372 | - | - | 1509 | 206 | 13 |

ಅ: ಕೃಷಿ ಇಲಾಖೆಯಲ್ಲಿ 1997-98 ಹಾಗೂ 19998-99 ಅಕ್ಟೋಬರ್ 15ರ ಒಳಗೆ ವರ್ಗಾಯಿಸಲಾಗಿರುವ ಅಧಿಕಾರಿಗಳು.

ಆ: ವರ್ಗಾವಣೆ ಆದೇಶ ನೀಡಿದ ಬಳಿಕ ಸ್ಥಳ ಬದಲಾಯಿಸಿ ಮರು ವರ್ಗಾಯಿಸಿದ ಪ್ರಕರಣಗಳು.

ಇ: ವರ್ಗಾವಣೆ ಆದೇಶದ ಬಳಿಕ ಆದೇಶಗಳನ್ನು ರದ್ದುಗೊಳಿಸಿ ಮತ್ತೆ ಅದೇ ಸ್ಥಳದಲ್ಲಿ ಮುಂದುವರಿಸಿದ ಪ್ರಕರಣಗಳು.

ಪ್ರಶ್ನೆ: (ಇ): 1998-99ನೇ ಸಾಲಿನಲ್ಲಿ 9 ಮಂದಿ ಅಧಿಕಾರಿಗಳನ್ನು ಆಡಳಿತಾತ್ಮಕ ಕಾರಣದಿಂದ ಅದೇ ಸ್ಥಳದಲ್ಲಿ ಮುಂದುವರೆಸಲಾಗಿದೆ.

ಒಬ್ಬರು ಸಹಾಯಕ ಕೃಷಿ ನಿರ್ದೇಶಕರವರ ಸೇವೆಯು ಅಗತ್ಯವಿರುವುದಾಗಿ ನಿರ್ದೇಶಕರು, ಪ್ರದೇಶಾಭಿವೃದ್ಧಿ ಕಾರ್ಯಕ್ರಮ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯವರ ಟಿಪ್ಪಣಿ ಮೇರೆಗೆ ಸರ್ಕಾರವು ಸದ್ಯದ ಕಛೇರಿಯಲ್ಲೇ ಮುಂದುವರೆಸಿರುತ್ತದೆ.

ಒಬ್ಬರು ಕೃಷಿ ಅಧಿಕಾರಿ ರವರು ರಾಜ್ಯ ಅಲ್ಪಸಂಖ್ಯಾತರ ಆಯೋಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು ವರ್ಗಾಯಿಸಲಾದ ಸ್ಥಳಕ್ಕೆ ಹಾಜರಾಗದ ಕಾರಣ ಇವರನ್ನು ಅಮಾನತ್ತಿನಲ್ಲಿಡಲಾಗಿತ್ತು, ಅಧ್ಯಕ್ಷರು, ಅಲ್ಪಸಂಖ್ಯಾತರ ಆಯೋಗ ಇವರ ಕೋರಿಕೆಯಂತೆ ವಿಚಾರಣೆ ಕಾಯ್ದಿರಿಸಿ ಅಮಾನತ್ತು ತೆರವುಗೊಳಿಸಿ ಅವರನ್ನು ಸದ್ಯದ ಕಛೇರಿಯಲ್ಲಿ ಮುಂದುವರೆಸಿದೆ.

ಒಬ್ಬ ಸಹಾಯಕ ಕೃಷಿ ಅಧಿಕಾರಿ ರವರು ವಯೋನಿವೃತ್ತಿ (31-1-99) ಹತ್ತಿರದಲ್ಲಿದ್ದು ವರ್ಗಾಯಿಸಲಾದ ಪ್ರಯುಕ್ತ ನ್ಯಾಯಾಲಯದ ಮೊರೆ ಹೊಕ್ಕು ವರ್ಗಾವಣೆ ಆದೇಶಕ್ಕೆ ತಡೆಯಾಜ್ಞೆ ತಂದಿದ್ದರೆಂದು ಅದೇ ಸ್ಥಳದಲ್ಲಿ ಮುಂದುವರೆಸಲಾಗಿದೆ. ರಿಟ್ ಪಿಟಿಷನ್ ನಂ: 21979: 98

ಒಬ್ಬ ಕೃಷಿ ಅಧಿಕಾರಿ, ಅವರ ಸೇವೆಯನ್ನು ರಾಜ್ಯ ಜಲಾನಯನ ನಿರ್ದೇಶನಾಲಯದಲ್ಲಿ ಅಗತ್ಯವಿದೆ ಎಂದು ಪ್ರಧಾನ ಕಾರ್ಯದರ್ಶಿಯವರು ಕೋರಿದ ಪ್ರಯುಕ್ತ ಅಲ್ಲಿಯೇ ಮುಂದುವರಿಸಿದೆ.

ಅನುಬಂದ - 2

ವಿವರಣೆ: 1998-99ನೇ ಸಾಲಿನಲ್ಲಿ ಒಟ್ಟು 9 ಮಂದಿ ಅಧಿಕಾರಿಗಳನ್ನು ಆಡಳಿತಾತ್ಮಕ ಕಾರಣದಿಂದ ಅದೇ ಸ್ಥಳದಲ್ಲಿ ಮುಂದುವರಿಸಲಾಗಿದೆ, ಉಳಿದಂತೆ 4 ಜನ ಅಧಿಕಾರಿಗಳನ್ನು ಈ ಕೆಳಕಂಡ ಕಾರಣಗಳ ಮೇಲೆ ಅಲ್ಲಿಯೇ ಮುಂದುವರಿಸಿದೆ.

1. ಒಬ್ಬ ಸಹಯಕ ಕೃಷಿ ನಿರ್ದೇಶಕರವರ ಸೇವೆಯು ಅಗತ್ಯವಿರುವುದಾಗಿ ನಿರ್ದೇಶಕರು, ಪ್ರದೇಶಾಭವೃದ್ಧಿ ಕಾರ್ಯಕ್ರಮ, ಗ್ರಾಮೀಣಾಭವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಟಿಪ್ಪಣಿ ಮೇರೆಗೆ ಸರ್ಕಾರವು ಸದ್ಯದ ಕಛೇರಿಯಲ್ಲಿಯೇ ಮುಂದುವರಿಸಿರುತ್ತದೆ.

2. ಒಬ್ಬ ಕೃಷಿ ಅಧಿಕಾರಿ ರವರು ರಾಜ್ಯ ಅಲ್ಪ ಸಂಖ್ಯಾತರ ಆಯೋಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವರ್ಗಾಯಿಸಲಾದ ಸ್ಥಳಕ್ಕೆ ಹಾಜರಾಗದ ಕಾರಣ ಇವರನ್ನು ಅಮಾನತ್ತಿನಲ್ಲಿಡಲಾಗಿತ್ತು. ಅಧ್ಯಕ್ಷರು ಅಲ್ಪಸಂಖ್ಯಾತರ ಆಯೋಗ ಇವರ ಕೋರಿಕೆಯಂತೆ ವಿಚಾರಣೆ ಕಾಯ್ದೆರಿಸಿ ಅಮಾನತ್ತು ತೆರವುಗೊಳಿಸಿ ಅವರನ್ನು ಸದ್ಯದ ಕಛೇರಿಯಲ್ಲಿ ಮುಂದುವರಿಸಿದೆ.

3. ಒಬ್ಬ ಸಹಾಯಕ ಕೃಷಿ ಅಧಿಕಾರಿ ರವರು ವಯೋನಿವೃತ್ತಿ (31-1-99) ಹತ್ತಿರದಲ್ಲಿದ್ದು, ವರ್ಗಾಯಿಸಿಲಾದ ಪ್ರಯುಕ್ತ ನ್ಯಾಯಾಲಯದ ಮೊರೆ ಹೊಕ್ಕು ವರ್ಗಾವಣೆ ಆದೇಶಕ್ಕೆ ತಡೆಯಾಜ್ಞೆ ತಂದಿದ್ದರಿಂದ ಅದೇ ಸ್ಥಳದಲ್ಲಿ ಮುಂದುವರಿಸಲಾಗಿದೆ. ರಿಟ್ ಪಿಟಿಷನ್ ನಂ: 21979: 98

4. ಒಬ್ಬ ಕೃಷಿ ಅಧಿಕಾರಿ ಅವರ ಸೇವೆಯನ್ನು ರಾಜ್ಯ ಜಲಾನಯನ ನಿರ್ದೇಶನಾಲಯದಲ್ಲಿ ಅಗತ್ಯವಿದೆ ಎಂದು ಪ್ರಧಾನ ಕಾರ್ಯದರ್ಶಿಯವರು ಕೋರಿದ ಪ್ರಯುಕ್ತ ಅಲ್ಲಿಯೇ ಮುಂದುವರಿಸಿದೆ.